ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ

ಸಿಸಿ 2378/2021

| | |
|---|---|
| ಪಿರ್ಯಾದುದಾರರು | ಆರೋಪಿತರು |
| ಕರ್ನಾಟಕ ಸರ್ಕಾರದ ಪರವಾಗಿ ಗ್ರಾಮಾಂತರ ಪೋ.ಠಾಣೆ, ಹರಿಹರ | ವಿರುದ್ದ ಪರಶುರಾಮ್ ಕೆ.ಜಾದವ್ |

ದೋಷಾರೋಪಣೆ

ಶ್ರೀ ಮಹಾದೇವ ಕಾನಟ್ಟಿ, ಬಿ.ಕಾಂ., ಎಲ್.ಎಲ್,ಬಿ.,(Spl) ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಹರಿಹರ ಆದ ನಾನು ನಿಮ್ಮನ್ನು ಅಂದರೆಃ

ಪರಶುರಾಮ್ ಕೆ.ಜಾದವ್ ತಂದೆ ಕೆಂಚಪ್ಪ ಜಾದವ್,
40 ವರ್ಷ, ವಾಸಃ ನಿಟ್ಟೂರು ಗ್ರಾಮ, ಹರಪನಹಳ್ಳಿ ಗ್ರಾಮ,
ಬಳ್ಳಾರಿ ಜಿಲ್ಲೆ.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 10.02.2021 ರಂದು ಆರೋಪಿತರಾದ ನೀವು ಚಾಸಾ.1 ರವರನ್ನು ಈಗ್ಗೆ 18 ವರ್ಷಗಳ ಹಿಂದೆ ಮದುವೆಯಾಗಿ 2 ಮಕ್ಕಳಿದ್ದು, ಚಾಸಾ.1 ರವರು ತನ್ನ ತವರು ಮನೆಗೆ ಹೋಗಿ ಬರುವುದನ್ನು ಆರೋಪಿ ವಿರೋಧಿಸುತ್ತಿದ್ದು, ದಿನಾಂಕಃ 10.02.2021 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುವ ಕುರುಬರಹಳ್ಳಿ ಗ್ರಾಮದ ಹತ್ತಿರ ಹರಿಹರ ಹರಪನಹಳ್ಳಿ ಹೆದ್ದಾರಿಯಲ್ಲಿ ಆರೋಪಿತನು ತನ್ನ ಹೆಂಡತಿಯಾದ ಚಾಸಾ.1 ರವರನ್ನು ನಿಟ್ಟೂರಿನಲ್ಲಿ ತನ್ನ ಮನೆಗೆ ಕೆಎ 24/ಎಂ 2420 ನೇ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಮಾನ್ಯತಾ ಶಾಲೆಯ ಹತ್ತಿರ ಆರೋಪಿ ಕಾರು ನಿಲ್ಲಿಸಿ, ತವರು ಮನೆಗೆ ಹೋಗಬೇಡ ಅಂದರೂ ಹೋಗುತ್ತೀಯಾ ಅಂತಾ ಚಾಸಾ.1 ರವರಿಗೆ ಕಿರುಕುಳ ನೀಡಿರುತ್ತೀರಿ. ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.498(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಈ ಮೇಲೆ ಹೇಳಿದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿತರಾದ ನೀವು "ಏನೇ ಬೋಸುಡಿ ತವರು ಮನೆಗೆ ಹೋಗಬೇಡಾ ಅಂದರೂ ಸಹ ಹೋಗುತ್ತೀಯಾ ಅಲ್ಲವೇ'' ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ ಅವಮಾನ ಮಾಡಿರುತ್ತೀರಿ. ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಈ ಮೇಲೆ ಹೇಳಿದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಕಾರಿನಲ್ಲಿಯೇ ಬಲವಾಗಿ ನಿಮ್ಮ ಎಡಮೊಣಕೈನಿಂದ ಚಾಸಾ.1 ರವರ ಮುಖಕ್ಕೆ ಗುದ್ದಿದ್ದರಿಂದ ಅವರ ಬಾಯಿಯಲ್ಲಿನ ಕೆಳಹಲ್ಲು ಮುರಿದು ತೀವ್ರ ಸ್ವರೂಪದ ರಕ್ತಗಾಯವಾಗಿರುತ್ತದೆ. ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.325 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ ಈ ಮೇಲೆ ಹೇಳಿದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ.1 ರವರಿಗೆ ''ನಿನಗೆ ಈಗ ಒಂದು ಗತಿ ಕಾಣಿಸುತ್ತೇನೆ '' ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಆರೋಪಿತರಾದ ನೀವು ಮೇಲ್ಕಂಡ ಅಪರಾಧಗಳಿಗೆ ಇದೇ ನ್ಯಾಯಾಲಯದಲ್ಲಿ ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

Sd/-

ದಿನಾಂಕ:23.08.2022

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ, ಹರಿಹರ

*SG*